# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,

## ಮಹದೇವಪುರ ವಲಯ, ಬೆಂಗಳೂರು – 560 113.

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021–22 ದಿನಾಂಕ: 07.01.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ–25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:–07.01.2022 ರಂದು ಅಪರಾಹ್ನ 12.00ಗಂಟೆಗೆ* https://meet.google.com/ouu-qwro-wpk *ರಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| ಅಧಿಕಾರಿಗಳು | | | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 3 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.25) | 9742919411 |
| 4 | ಶ್ರೀ.ದಯಾನಂದ | ದಾಸಪ್ಪ ಲೇಔಟ್ | |
| 5 | ಶ್ರೀಮತಿ.ಸಿಂಧು | | |
| 6 | ಶ್ರೀಮತಿ.ಸೋನಿಯಾ | | |
| 7 | ಶ್ರೀ.ಥಾಮಸ್ | | |
| 8 | ಶ್ರೀ.ದಾಮೋದರನ್ | | |
| 9 | ಶ್ರೀ.ಪ್ರತಾಪ್ | | |
| 10 | ಶ್ರೀಮತಿ.ಕುಸುಮಾ | | |

## ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–

ಶ್ರೀ.ದಯಾನಂದ:– ದಾಸಪ್ಪ ಲೇಔಟ್ 1ನೆ ಕ್ರಾಸ್‌ನಲ್ಲಿ ಚರಂಡಿ ಸಮಸ್ಯೆ, ನೀರಿನ ಸಮಸ್ಯೆಗಳಿದ್ದು, ಬರುವ ಬೇಸಿಗೆ ಕಾಲ ಬರುವಷ್ಟರಲ್ಲಿ ಬೋರ್‌ವೆಲ್ ಮೋಟರ್ ಪಂಪ್ ದುರಸ್ಥಿ ಮೋರಿ ವ್ಯವಸ್ಥೆ, ಬೀದಿ ದೀಪಗಳನ್ನು ಅಳವಡಿಸಲು ಕೋರುತ್ತಾ, ರಸ್ತೆಗಳ ಡಾಂಬರೀಕರಣ ಹಾಗೂ ಅಗತ್ಯ ದುರಸ್ಥಿ ಕಾರ್ಯಾಗಾರವನ್ನು ಶೀಘ್ರವಾಗಿ ನಿರ್ವಹಿಸಲು ಕೋರಿರುತ್ತಾರೆ.

ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ–ವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಮ್ಯಾಥ್ಯೂ:– ಅಗರ ಮುಖ್ಯರಸ್ತೆ 5ನೇ ಕ್ರಾಸ್ ಹೊರಮಾವು ಇಲ್ಲಿ ಮೋರಿ ಡ್ರೈನ್ ಮಾಡಲು ಹಾಗೂ ಡಾಂಬರೀಕರಣ ಮಾಡಲು ಕೋರಿರುತ್ತಾರೆ.

ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ–ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ರತ್ನ ಎಂ ಗೌಡ, ರೋಚ್ ಎನ್‌ಕ್ಲೇವ್:– ರವರು ಮಾತನಾಡಿ ಅತಿ ಮುಖ್ಯವಾಗಿ ಬೀದಿ ದೀಪಗಳ ದುರಸ್ಥಿ ಹಾಗೂ ಹೊಸ ಲೈಟ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.

ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ–ವಿಭಾಗ, ಹಾಗೂ ಸಂಬಂಧಪಟ್ಟ ಬೀದಿ ದೀಪಗಳ ನಿರ್ವಹಣೆ ಅಧಿಕಾರಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ಸೋನಿಯಾ ಹಾಗೂ ಶ್ರೀ.ಥಾಮಸ್ ಹಾಗೂ ಶ್ರೀಮತಿ.ಸಿಂಧು:- ರವರು ಮಾತನಾಡುತ್ತಾ ವಡ್ಡರಪಾಳ್ಯ ಇಲ್ಲಿ ಒಂದೇ ರಸ್ತೆಯನ್ನು ಹೊರತುಪಡಿಸಿ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣವಾಗಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಕಳೆದ ವಾರದಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಹಾಗೂ Plan of Sanction ನ್ನು ಸಹ ಆಗಿರುವುದಾಗಿ ತಿಳಿಸಿರುತ್ತಾರೆ. ಸದರಿ ರಸ್ತೆಯು ಬಹಳ ದುರಸ್ಥಿಯಲ್ಲಿದ್ದು, ಅತೀ ಶೀಘ್ರದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್.ಬಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ಕುಸುಮಾ :- ರವರು ಮಾತನಾಡುತ್ತಾ, 2ನೇ ಕ್ರಾಸ್ ದಾಸಪ್ಪ ಲೇಔಟ್ ಇಲ್ಲಿ ಬೋರ್‌ವೆಲ್ ದುರಸ್ತಿಯಾಗಿರುತ್ತದೆ. ನೀರಿನ ಸಮಸ್ಯೆಯಾಗಿರುತ್ತದೆ. ಸರಿಯಾದ ಪೈಪ್ ಸಂಪರ್ಕ ಮಾಡಿರುವುದಿಲ್ಲ. ಹಾಗೂ ಡ್ರೈನೇಜ್ ಒಳಚರಂಡಿ ವ್ಯವಸ್ಥೆ ಶುರು ಮಾಡಿರುವುದಿಲ್ಲ. ರಾತ್ರಿ ವೇಳೆಯಲ್ಲಿ ಮನೆಯ ಮುಂದೆ ಅಳವಡಿಸಿರುವ ಟ್ಯಾಪ್‌ಗಳನ್ನು ಕಳ್ಳತನವಾಗಿರುತ್ತದೆ. ಆದ್ದರಿಂದ ಸಿ.ಸಿ.ಕ್ಯಾಮೆರಾ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂಎಸ್.ಎಸ್.ಬಿ ಮತ್ತು ಸಂಬಂಧಪಟ್ಟ ಟ್ರಾಫಿಕ್ ಅಧಿಕಾರಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ವಾಸುದೇವರನ್(ರಾಮಮೂರ್ತಿನಗರ ವೆಲ್‌ಫೇರ್ ಅಸೋಸಿಯೇಷನ್ ರವರು ಮಾತನಾಡುತ್ತಾ 16ನೇ, 17ನೇ, 18ನೇ ಕ್ರಾಸ್ ರಾಮಮೂರ್ತಿನಗರ ಡಾಂಬರೀಕರಣ, 4ನೇ 'ಎ' ಕ್ರಾಸ್ ಕಲ್ವರ್ಟ್ ಮೋರಿ ಪಕ್ಕ ಟಾರ್ ಹಾಕಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ ಮತ್ತು ಹಿರಿಯ ಆರೋಗ್ಯ ಅಧಿಕಾರಿ, ವಾರ್ಡ್ ನಂ.25 ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ಸಿಂಧು ರವರು ಮಾತನಾಡುತ್ತಾ 4ನೇ ಕ್ರಾಸ್ ಅಗರ ಹೊರಮಾವು ಇಲ್ಲಿ ಸಿವೇಜ್ ಸೋರಿಕೆಯಾಗುತ್ತಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ರವರು ಖುದ್ದು ಸ್ಥಳ ಪರಿಶೀಲಿಸಲು ಕೋರಿರುತ್ತಾರೆ. ಹಾಗೂ Regular Lights Scheme ನ್ನು ಈ ವಾರ್ಡ್‌ಗಳಲ್ಲಿ ಪ್ರಾರಂಭಿಸಲು ಕೋರಿರುತ್ತಾರೆ. ಹಾಗೂ ಪ್ರಸ್ತುತ ಮುಂದಿನ ಚುಚ್ಚುಮದ್ದು 15-18 ವರ್ಷದವರಿಗೆ ಹಾಕಿಸಲು 15-18 ವರ್ಷದವರಿಗೆ ಪಟ್ಟಿಮಾಡಿ, ಶಾಲೆ ಬಿಟ್ಟು ಮನೆಯಲ್ಲೆ ಇರುವ ಪ್ರತ್ಯೇಕ ಮಕ್ಕಳಿಗೆ ಸಬ್ ಕೌಂಟರ್ ಮಾಡಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. [signature]

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[signature]

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ಉಪ-ವಿಭಾಗ
ಬಿ.ಬಿ.ಎಂ.ಪಿ